ಶ್ರೀ ಜೆ.ಸಿ. ಮಾಧುಸ್ವಾಮಿ :- ಸನ್ಮಾನ್ಯ ನಾಣಯ್ಯನವರಿಗೆ ಆ ವಿಷಯೆಲ್ಲಾ ಗೊತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ನಾಣಯ್ಯನವರು ಸುಮ್ಮನೆ ಕುಳಿತಿರುದದನ್ನು ನೋಡಿದರೆ ನನಗೆ ನೋವಾಗುತ್ತಿದೆ

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಮಾದಪ್ಪನವರು ಕೇಳಿರುವಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸ್ವಲ್ಪ ಮಟ್ಟಿಗೆ ಆ ಆಶ್ರಯ ಮನೆಗಳನ್ನು ಕಟ್ಟತಕ್ಕಂಥ ಸಮಯದಲ್ಲಿ ದುರುಪಯೋಗವಾಗಿದೆ. ಹಣವನ್ನು ಡ್ರಾ ಮಾಡಿದ್ದಾರೆ. ಮನೆಗಳನ್ನು ಕಟ್ಟಲಿಲ್ಲ. ಈ ತರಹ: ಆಗಿರುವುದರಿಂದ ಜಿಲ್ಲಾ ಪಂಚಾಯಿತಿಯವರು ಒಂದು ರಿಸೆಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ನಾನು ಆ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುವಂಥದ್ದು , ಮಾನ್ಯ ವಸತಿ ಸಚಿವರು ಮಾಹಿತಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನಾನೇಕೊಡುತ್ತೇನೆ. ಈ ಕೆಲಸವನ್ನು ನಾವು ನೀವು ಒಟ್ಟಾರೆ ಸೇರಿ ಮಾಡೋಣ.

(ಅ) <u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿನ 10 ಪ್ರಶ್ನೆ ಗಳ ಪೈಕಿ 7 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸುಳ್ಯ ತಾಲ್ಲೂಕಿನಲ್ಲಿ ನಿರ್ಮಿಸಿರುವ ಆಶ್ರಯ ಮನೆಗಳು

141 (242) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆ ಜಾರಿಗೆ ಬಂದಾಗಿನಿಂದ ಕಟ್ಟಲಾಗಿರುವ ಮನೆಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಆ ಪೈಕಿ ಸುಳ್ಯ ತಾಲ್ಲೂಕಿನಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

ಇ) 1997-98ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ ಮನೆಗಳನ್ನು ಕಟ್ಟಲು ಗುಡಿ ಹೊಂದಿರುವ ಸಂಖ್ಯೆ ಎಷ್ಟು? ಹಾಗೂ ಎಷ್ಟು ಮನೆಗಳನ್ನು ಪೂರ್ಣ ಗೊಳಿಸಲಾಗಿದೆ; ಇನ್ನು ಕಟ್ಟದೆ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು?

ಈ) ಸುಳ್ಯ ತಾಲ್ಲೂಕಿನಿಂದ ಆಶ್ರಯ ಯೋಜನೆಯಡಿ ಮನೆಗಳನ್ನು ಪಡೆಯಲು ಇದುವರೆಗೂ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?